ನ್ಯಾಯ ಸಮ್ಮತವಾದ ಬೆಲೆ ಕೊಡುವ ಸಲುವಾಗಿ ಎಲ್ಲಾ ಕಡೆ ಒಂದೇ ರೀತಿಯ ದರವನ್ನು ಕೊಡಲಿಕ್ಕಾಗಲಿಕ್ಕಿಲ್ಲ. ವಿಭಿನ್ನ ಕಾರ್ಖಾನೆಗಳಲ್ಲಿ ಇಳುವರಿ ಮೇಲೆ ದರ ಗೊತ್ತುಪಡಿಸಬೇಕಾಗುತ್ತದೆ. ಆ ಭಾಗದವರನ್ನು ಬೇರೆ, ಈ ಭಾಗದವರನ್ನು ಬೇರೆ ಕರೆದು...

(ಗೊಂದಲ)

ಚೇರ್ಮನ್ :– ಕೃಷ್ಣಪ್ಪನವರೇ, ನಂತರ ತಮಗೆ ಅವಕಾಶ ಕೊಡುತ್ತೇನೆಂದು ಹೇಳಿದ್ದೇನೆ. ಅವರು ಈಗ ಉತ್ತರ ಕೊಡುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು :– ಹೆಚ್ಚುವರಿ ಕಬ್ಬನ್ನು ಅರೆಸತಕ್ಕಂಥ ಕೆಲಸ ಮಾಡಿಸುತ್ತೇವೆ ಎಂದು ಅವರು ಹೇಳಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :– ಈ ಸರ್ಕಾರ ಕಬ್ಬಿನ ರೈತರ ರಕ್ಷಣೆಗೆ ಬರಲಿಲ್ಲ. ಕಬ್ಬು ಬೆಳೆದಂಥ ರೈತರ ಕತ್ತಿಗೆ ನೀವು ಹಗ್ಗ ಹಾಕಿದ್ದೀರಿ. ಇದು ಸರಿಯಲ್ಲ. ನಿಮ್ಮ ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಚೇರ್ಮನ್ :– ಈಗ ಕೃಷ್ಣಪ್ಪನವರು.

ಶ್ರೀ ಎ. ಕೃಷ್ಣಪ್ಪ :– ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ 2–3 ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. 2–3 ವಿಚಾರಗಳಲ್ಲಿ ಮಾತ್ರ ನಾನು ಅವರಿಗೆ clarification ಕೇಳುತ್ತೇನೆ. ಹಿಂದಿನ ಸರ್ಕಾರ ಯಾವ ಕಾರ್ಖಾನೆಗಳಿಗೂ guarantee ಯನ್ನು ಕೊಡಲಿಲ್ಲ ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಅದು records ಗೆ ಹೋಗಿದೆ. ನನಗೆ ಜ್ಞಾಪಕವಿರುವ ಪ್ರಕಾರ, ನಾವು 6 ರಿಂದ 8 ಫ್ಯಾಕ್ಟರಿಗಳಿಗೆ loan raise ಮಾಡಲು guarantee ಕೊಟ್ಟಿದ್ದೇವೆ. Tax exemption ಅನ್ನೂ ಕೊಟ್ಟಿದ್ದೇವೆ. Excess ಬೆಳೆ ಬಂದಾಗ ಮಹಾರಾಷ್ಟ್ರ ಸರ್ಕಾರದ Chief Minister ರವರ ಜೊತೆ ಮಾತನಾಡಿ, ನಾವು ನಮ್ಮ production ಅನ್ನು ಅಲ್ಲಿಗೆ ಕಳುಹಿಸಿ crush ಮಾಡಿಸಿದ್ದೇವೆ. ಇದು ಇರತಕ್ಕಂಥ ಸತ್ಯವಾದ ವಿಚಾರ. ಯಾವ ಸರ್ಕಾರವೂ guarantee ಕೊಡಲು ಮುಂದೆ ಬರಲಿಲ್ಲ ಎಂದು ಅವರು ಹೇಳಿದರು. Tax exemption ಕೊಡಿ ಎಂದೇನು ಎಲ್ಲಾ ಮಾನ್ಯ ಸದಸ್ಯರು ಕೇಳುತ್ತಿದ್ದಾರೆ, ಅದನ್ನು ನಾವು ಹಿಂದಿನ ಸರ್ಕಾರದಲ್ಲಿ ಮಾಡಿದ್ದೇವೆ. ಅದನ್ನು ಇವತ್ತು ಈ ಸರ್ಕಾರವೂ ಮಾಡಿ ರೈತರನ್ನು ಉಳಿಸಬೇಕು ಎಂದು ನಾನು ಧ್ವನಿ ಗೂಡಿಸುತ್ತೇನೆ.

ಶ್ರೀ ಸಿ.ಎಂ. ಉದಾಸಿ :– ಹಿಂದಿನ ಸರ್ಕಾರದವರು transportation subsidy ಕೊಡುತ್ತೇವೆ ಎಂದು ಹೇಳಿದ್ದರು, ಆದರೆ ಕೊಡಲಿಲ್ಲ. ಅದು ನನಗೆ ಗೊತ್ತಿದೆ. Bank Guarantee ಕೊಡಬೇಕಾದಂಥ ಸಂದರ್ಭದಲ್ಲಿ ಅವರಿಗೆ ಬೇಕಾದವರಿಗೆ ಕೊಟ್ಟಿರಬಹುದು. ಎಷ್ಟು ಜನರಿಗೆ ಕೊಟ್ಟಿಲ್ಲ ಎನ್ನುವುದಕ್ಕೆ ದಾಖಲೆಯನ್ನು ಪಡೆದು, ಮತ್ತೊಂದು ದಿವಸ ಅದನ್ನು ಇಲ್ಲಿ ಪ್ರಸ್ತಾಪ ಮಾಡಬೇಕು ಎಂದರೆ, ನಾನು ಪ್ರಸ್ತಾಪ ಮಾಡಲು ಬಯಸುತ್ತೇನೆ. ಇವತ್ತು ನಾನು ಒಂದು ಮಾತನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಮಹಾರಾಷ್ಟ್ರದಲ್ಲಾಗಲೀ, ಆಂಧ್ರ ಪ್ರದೇಶದಲ್ಲಾಗಲೀ ದರ ನಿಗದಿಪಡಿಸಿಲ್ಲ. ದರ ಗೊತ್ತು ಪಡಿಸಬೇಕಾದಾಗ ಕಾರ್ಖಾನೆಗಳ ಜೊತೆಗೆ meeting ಮಾಡಿ, High Power Committee ಯಲ್ಲಿ ಒಂದು meeting ಮಾಡಿ ದರ ಗೊತ್ತುಪಡಿಸುವಂಥ ಕೆಲಸವನ್ನು ಮಾಡುತ್ತೇವೆ.

(ಗೊಂದಲ)

ಶ್ರೀ ಕಾಕಾ ಸಾಹೇಬ ಪಾಂಡುರಂಗ :– High Power Committee meeting ಮಾಡುವುದು ಬೇಡ ಎಂದು ನಿಮಗೆ ಯಾರಾದರೂ ಹೇಳಿದ್ದರೇ?

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಬೇಡ ಎಂದು ಯಾರಾದರೂ ಸರ್ಕಾರಕ್ಕೆ ನಿರ್ಬಂಧ ಹಾಕಿದ್ದರೇ?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ನಿಮ್ಮ ಮಾತಿಗೆ ಕವಡೆ ಕಿಮ್ಮತ್ತಿಲ್ಲ.

(ಗೊಂದಲ)

(ಅನೇಕ ಸದಸ್ಯರುಗಳು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಶ್ರೀ ಪ್ರಕಾಶ್ ಬಿ. ಹುಕ್ಕೇರಿ :– ಇಷ್ಟೆಲ್ಲಾ ಇದ್ದರೂ ಸಹ ಬೆಲೆ ನಿಗದಿ ಮಾಡುವುದಕ್ಕೆ State Act ಇಲ್ಲ. ಆದ್ದರಿಂದ ನಾವು ಕಾರ್ಖಾನೆಯವರನ್ನು ಕರೆಸಿ ಮಾಡಬೇಕಾಗಿದೆ.

(ಗೊಂದಲ)

ಶ್ರೀ ಕಾಕಾ ಸಾಹೇಬ ಪಾಂಡುರಂಗ :– ಮಹಾರಾಷ್ಟ್ರದಲ್ಲಿ 1,140 ರೂಪಾಯಿಗಳು ಎಂದು rate fix ಮಾಡಿದ್ದಾರೆ. Fix ಮಾಡಿಲ್ಲ ಎಂದು ಸಚಿವರು ಹೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ :– ನಾವು charge ತೆಗೆದುಕೊಂಡಾಗ ಇದ್ದ ಬಾಕಿಯ ಬಗ್ಗೆ ನಾವು negotiation ಮಾಡಿಯೇ ಅಲ್ಲವೇ 746 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದು. High Power Committee, Minister, Management ನವರನ್ನು ಕರೆಸಿ ಮಾತನಾಡಿ payment ಮಾಡಿಸಿದ್ದೆವು. Payment 6-7 ವರ್ಷದಿಂದ ಬಾಕಿ ಇದ್ದರೆ ರೈತರು ಹೇಗೆ ಉಳಿಯುತ್ತಿದ್ದರು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇನ್ನೂ Bill ಗಳು ಇವೆ. ತಾವು Bill ತೆಗೆದುಕೊಳ್ಳಿ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :– ನೀವು ಇಲ್ಲಿದ್ದಾಗ ಮಾಡಿದಂಥಾದ್ದು ನಿಮಗೆ ನೆನಪಿಲ್ಲವೇ?

(ಗೊಂದಲ)

ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ :– ಹಿಂದೆ ಅದು ಮಾಡಿಲ್ಲ, ಇದು ಮಾಡಿಲ್ಲ ಎಂದು ಹೇಳಿ ನಿಮ್ಮನ್ನು ನೀವು ಸಮರ್ಥನೆ ಮಾಡಿಕೊಳ್ಳುತ್ತಿರುವಿರೇ ವಿನಃ ನೀವು ರೈತರ ನೆರವಿಗೆ ಬರುತ್ತಿಲ್ಲ. ಈ ಸರ್ಕಾರಕ್ಕೆ commitment ಇಲ್ಲ, ದಕ್ಷತೆಯೂ ಇಲ್ಲ, ನಿಮ್ಮ ಹತ್ತಿರ ಏನು Power ಸಹ ಇಲ್ಲ. ನಿಮ್ಮ ಮಾತಿಗೆ ಕವಡೆ ಕಿಮ್ಮತ್ತಿಲ್ಲ. ನಿಮ್ಮ ಮಾತನ್ನು ಯಾರೂ ಕೇಳುವುದಿಲ್ಲ. ನೀವೇನು ಇಷ್ಟು ದುರ್ಬಲರಾಗಿಬಿಟ್ಟಿದ್ದೀರಿ.

(ಗೊಂದಲ)

ಚೇರ್ಮನ್ :– ಈಗ ಮಾನ್ಯ ರಮೇಶ್ ಕುಮಾರ್‌ರವರು.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಸನ್ಮಾನ್ಯ ಸಭಾಧ್ಯಕ್ಷರೇ, ಈ ಕಡೆಯ ಸದಸ್ಯರು ಎಷ್ಟೊಂದು ಸಮರ್ಥವಾಗಿ, ಪರಿಣಾಮಕಾರಿಯಾಗಿ ಮಂತ್ರಿಗಳ ಗಮನವನ್ನು ಸೆಳೆಯಲು ಪ್ರಯತ್ನವನ್ನು ಪಟ್ಟರೂ ಸಹ, ಸ್ವತಃ ಕೃಷಿಕರಾಗಿದ್ದು, ಒಂದು ಸಕ್ಕರೆ ಕಾರ್ಖಾನೆಯ ಚೇರ್ಮನ್ನರೂ ಆಗಿದ್ದುಕೊಂಡು ಸಮಸ್ಯೆ ಏನೆಂದು ಅರ್ಥವಾಗಿ, ಉತ್ತರ ಕೊಡುವುದಕ್ಕೆ ಚೈತನ್ಯ ಇಲ್ಲದೇ, ಹಾರಿಕೆಯ ಉತ್ತರ, ಜಾರಿಕೆಯ ಉತ್ತರವನ್ನು ಕೊಟ್ಟು, ಸಂಕಷ್ಟದಲ್ಲಿರುವಂಥ ಕಬ್ಬು ಬೆಳೆಗಾರರಿಗೆ ಯಾವುದೇ ವಿಧವಾದಂಥ ಖಚಿತ ಪರಿಹಾರವನ್ನು ಕೊಡುವುದರಲ್ಲಿ ಸಂಪೂರ್ಣ ವಿಫಲರಾಗಿರತಕ್ಕಂಥ ಈ ನಿಷ್ಕ್ರಿಯ ಸರ್ಕಾರದ ಈ ವಿಫಲವಾದ ಹೇಳಿಕೆಯನ್ನು ವಿರೋಧಿಸಿ, ಪ್ರತಿಭಟಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಸದಸ್ಯರು, ಶ್ರೀ ಕೆ.ಆರ್.ರಮೇಶ್ ಕುಮಾರ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಬಿ.ಆರ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ಈ ಸರ್ಕಾರದ ನಿಲುವನ್ನು ಖಂಡಿಸಿ ನಾವೂ ಕೂಡ ಸಭಾತ್ಯಾಗ ಮಾಡುತ್ತೇವೆ. ಇವರು ಖಾಸಗಿ ಕಾರ್ಖಾನೆಗಳ ಮಾಲೀಕರೊಂದಿಗೆ ಶಾಮೀಲಾಗಿದ್ದಾರೆ ಎಂದು ನಾನು ನೇರವಾಗಿ ಆರೋಪ ಮಾಡುತ್ತೇನೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಬಿ.ಆರ್. ಪಾಟೀಲ್, ಹೆಚ್.ವೈ. ಮೇಟಿ ಮತ್ತು ಕೆ.ವೆಂಕಟೇಶ್‌ರವರುಗಳು ಸಭಾತ್ಯಾಗ ಮಾಡಿದರು)

(6–00 ಗಂಟೆ)

ಶ್ರೀ ಜೆ.ಸಿ. ಮಾಧುಸ್ವಾಮಿ :– ಉದಾಸಿಯವರು ಸಕ್ಕರೆ ಕ್ಷೇತ್ರದ ವಿಷಯಕ್ಕೆ ಬಂದಾಗ ಅವರ ಪರವಾಗಿ ಹೋರಾಟ ಮಾಡಿರುವವರ ನಾವು. ಉದಾಸಿಯವರೆ, ಈ ಶಾಸನ ಸಭೆಯಲ್ಲಿ ಹೋರಾಟ ಮಾಡಿರುವವರು ನಾವು. ರೈತರಿಗೆ ನೀವು ಕನಿಷ್ಟ ಧಾರಣೆ ಕೊಡುತ್ತೀರಾ, ಅವರ ಕಷ್ಟಕ್ಕೆ ಬರುತ್ತೀರಾ? ಯಾವ ಕಾಲದಲ್ಲಿ ಆ ಕಬ್ಬು ಅರೆಯುತ್ತೀರಾ? ಅಷ್ಟು ಹೇಳಿ ಎಂದರೂ ನೀವು ಹೇಳುವುದಕ್ಕೆ ವಿಫಲರಾದಿರಿ. ನಮ್ಮ ಸಕ್ಕರೆ ಮಂತ್ರಿಗಳಿಂದ, ನಿಮ್ಮಿಂದ ನಾವು ನಿರೀಕ್ಷೆ ಮಾಡಿದ್ದೆವು. ಏಕೆಂದರೆ, ನೀವು practical ಆಗಿ ಅಲ್ಲಿರುವವರು. ಸುಮಾರು 20 ವರ್ಷಗಳಿಂದ ನೀವು ಆ ಕ್ಷೇತ್ರದಿಂದ ಬಂದಿರುವವರು. ನೀವೇ ರೈತರನ್ನು ಈ ಸ್ಥಿತಿಗೆ ತಂದರೆ, ನಾಳೆ ಜನರ ಗತಿ ಏನು?

ಶ್ರೀ ಸಿ.ಎಂ. ಉದಾಸಿ :– ನಾನು ಕರೆದು ಮಾತನಾಡುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಈ ಧೋರಣೆಯನ್ನು ನಾವು ಕೂಡ ಸಹಿಸುವುದಿಲ್ಲ. ನಾವೂ walk out ಮಾಡುತ್ತೇವೆ.

(ಈ ಹಂತದಲ್ಲಿ ಶ್ರೀ ಜೆ.ಸಿ. ಮಾಧುಸ್ವಾಮಿಯವರು ಸಭಾತ್ಯಾಗ ಮಾಡಿದರು)

ಶ್ರೀ ಶಿವಾನಂದ ಎಸ್. ಪಾಟೀಲ್ :– ಹೈಕೋರ್ಟ್ ಆರ್ಡರ್ ಅನ್ನು misuse ಮಾಡಿಕೊಂಡವನ ಮೇಲೆ action ತೆಗೆದುಕೊಳ್ಳುವ...

ಶ್ರೀ ಸಿ.ಎಂ. ಉದಾಸಿ :– ಮಾತನಾಡಿ ಆಮೇಲೆ action ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಶಿವಾನಂದ ಎಸ್. ಪಾಟೀಲ್ :– ಮತ್ತೆ, ನೀವು co-operative field ಬಗ್ಗೆ ಮಾತನಾಡುವವರು. ತಾವೂ cooperative field ನಿಂದ ಬಂದಿರುವವರು.

(ಗೊಂದಲ)

ಶ್ರೀ ಜಯಪ್ರಕಾಶ್ ಹೆಗ್ಡೆ :– ನಾನು ಪ್ರಾರಂಭದಲ್ಲೇ ಉದಾಸಿಯವರಿಂದ ನಿರೀಕ್ಷೆಯನ್ನು ಮಾಡಿದ್ದೇನೆಂದು ಹೇಳಿದೆ. ಹಾಲಿ ರೈತರ ಬಗ್ಗೆಯೂ ಏನೂ ಹೇಳಲಿಲ್ಲ. ನಮ್ಮ ಸಕ್ಕರೆ ಕಾರ್ಖಾನೆಗಳನ್ನು ಖಾಸಗೀಕರಣ ಮಾಡಿದ ಮೇಲೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಬಗ್ಗೆ ಏನಾಯಿತೆಂಬ ತಮಗೆ ಗೊತ್ತಿದೆ. ಅಲ್ಲಿ ರೈತರ ಹಳೆಯ ಬಾಕಿಯನ್ನು,

ಕಾರ್ಮಿಕರ ಸಂಬಳದ ಬಾಕಿಯನ್ನು, ಸಹಕಾರಿ ಸಂಸ್ಥೆಗಳಿಂದ ಏನು ಸಾಲವನ್ನು ಪಡೆದಿತ್ತು ಇದ್ಯಾವುದಕ್ಕೂ ಏನೂ ಉತ್ತರವನ್ನು ಹೇಳದಿದ್ದರಿಂದ ನಾನೂ ಅದನ್ನು ಪ್ರತಿಭಟಿಸಿ ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸಭಾತ್ಯಾಗ ಮಾಡಿದರು)

(ಗೊಂದಲ)

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರು, ಶ್ರೀ ಜೆ.ಸಿ. ಮಾಧುಸ್ವಾಮಿ, ಶ್ರೀ ವಾಟಾಳ್ ನಾಗರಾಜ್, ಶ್ರೀ ಕೆ. ಜಯಪ್ರಕಾಶ್ ಹೆಗ್ಡೆಯವರು ಸದನಕ್ಕೆ ಆಗಮಿಸಿದರು)

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್ :- ದಯವಿಟ್ಟು, Calling attentionಗೆ ಅವಕಾಶ ಕೊಡಿ. 3 ದಿವಸದಿಂದ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ :- ನಾವು protest ಮಾಡಿ ಹೊರಗೆ ಹೋಗಿದ್ದೇವೆ, you take this step. What is this? You have to guide him (Hon'ble Chairman) I say. He is in the panel.

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು :- ಛೇರ್ಮನ್‌ರವರಿಗೆ ಗೌರವ ಕೊಟ್ಟು ಮಾತನಾಡಿ. (ಗೊಂದಲ) ನಾಚಿಕೆಯಾಗುವುದಿಲ್ಲವೆಂದರೆ, ಇದು ಛೇರ್ಮನ್‌ರವರಿಗೆ ಗೌರವ ತೋರಿಸುವ ವಿಧಾನವೇ ಇದು? (ಗೊಂದಲ) ನಾಚಿಕೆ ಆಗುವುದಿಲ್ಲವೆಂದಲ್ಲ. (ಗೊಂದಲ) ಛೇರ್ಮನ್‌ರವರಿಗೆ ನಾವೂ ಗೌರವ ಕೊಡಬೇಕು... (ಗೊಂದಲ) ಆ ಪೀಠಕ್ಕೆ ಗೌರವ ಕೊಡಬೇಕು. (ಗೊಂದಲ) ನಾವು ಪೀಠಕ್ಕೆ ಗೌರವ ಕೊಡುವುದನ್ನು ಮೊದಲು ಕಲಿಯಬೇಕು... (ಗೊಂದಲ) ಪ್ರತಿಭಟಿಸಿ, ಬೇಡವೆಂದಲ್ಲ.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ :- ಅವರಿಗೇನೋ ಗೊತ್ತಿಲ್ಲ, ನೀವು, don't you have the courtesy of calling us? Bill ಇದೆ, ಅವರನ್ನು ಕರೆಯಿರಿ ಎಂದು ಹೇಳುವ ಸೌಜನ್ಯ ಬೇಡವೇ?

(ಗೊಂದಲ)